(ಇಂದು ದಿನಾಂಕಃ 07–08–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ವಿ ಟಿ ಕೆ ವಕೀಲರಿಂದ ಃ-

4) ಹಾಳಕುಸಗಲ್ ಗ್ರಾಮದ ವಿಪಿಸಿ ಸಂಖ್ಯೆ 176 ಬಸವ್ವ ಕೋಂ ಪರಸನಗೌಡ ಪಾಟೀಲ ಹಾಗೂ 177 ಬಸವ್ವ ಕೋಂ ಶಿವನಗೌಡ ರಾಚಪ್ಪನರವರ ಹೆಸರಿನಲ್ಲಿದ್ದವು ಎಂದರೆ ನಿಜ. ಬಸವ್ವ ಕೋಂ ಪರಸನಗೌಡ ಪಾಟೀಲ ರವರಿಗೆ ಶಾಂತವ್ವ, ಸುಧಾ, ಲಾವಣ್ಯ ಹಾಗೂ ನೇತ್ರಾವತಿ ರವರು ಮಕ್ಕಳು ಎಂದರೆ ನಿಜ. ನಿಪಿ-3 ರ ಪ್ರಕಾರ ವಿಪಿಸಿ ಸಂಖ್ಯೆ 177 ರ ಆಸ್ತಿಗೆ ಗದಿಗೆಪ್ಪಗೌಡ, ದ್ಯಾಮನಗೌಡ, ಶಿವಕುಮಾರ ಹಾಗೂ ಬಸನಗೌಡ ರವರ ಹೆಸರುಗಳು ಗ್ರಾಮ ಪಂಚಾಯಿತಿಯ ಠರಾವಿನ ಪ್ರಕಾರ ದಾಖಲಿಸಲಾಗಿದೆ ಎಂದರೆ ನಿಜ. ಸದರಿ 177 ದಾವಾ ಆಸ್ತಿ ಎಂದರೆ ನಿಜ. ಬಸವ್ವ ಕೋಂ ಶಿವನಗೌಡ ರಾಚಪ್ಪನರವರ ರವರು ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದು ಕೊಟ್ಟಿದ್ದಾರೆ ಎಂದು ಸದರಿ ಪಂಚಾಯಿತಿ ಠರಾವು ಆಗಿದೆ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರ ನೋಂದಣಿಯಾಗಿಲ್ಲ. ಬಸವ್ವ ಕೋಂ ಶಿವನಗೌಡ ರಾಚಪ್ಪನವರ ರವರು ನಮಗೆ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದು ಕೊಟ್ಟಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರದ ಆದಾರದಿಂದ ನಮಗೆ ಮಾಲಿಕತ್ವದ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ.

5) ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ನೋಂದಣಿಗಾಗಿ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನಾವು ಹಾಜರು ಪಡಿಸಿಲ್ಲ. ನಿಪಿ-3 ರ ಠರಾವಿನ ಪ್ರಕಾರ ವಿಪಿಸಿ ಸಂಖ್ಯೆ 177 ರ ಆಸ್ತಿಯ ನಿಪಿ-1 ರಲ್ಲಿ ಬಸವ್ವ ಕೋಂ ಶಿವನಗೌಡ ರಾಚಪ್ಪನವರ ರವರ ಹೆಸರು ಕಡಿಮೆ ಮಾಡಲಾಗಿದೆ ಎಂದರೆ ನಿಜ. ಯಾವ ಠರಾವಿನ ಪ್ರಕಾರ ನಮ್ಮ ಹೆಸರನ್ನು ದಾಖಲಿಸಲಾಗಿದೆ ಎಂದು ನಿಪಿ-2 ರಲ್ಲಿ ಬರೆದಿಲ್ಲ ಎಂದರೆ ನಿಜ. ನಿಪಿ-1 ದಾಖಲೆ ನಿಪಿ-3 ಪಂಚಾಯಿತಿಯ ಠರಾವಿನ ಆಧಾರದ ಮೇಲೆ ಮಾಡಲಾಗಿದೆ. ಪಂಚಾಯಿತಿಯ ಠರಾವಿನ ಆಧಾರದಿಂದ ನಿಪಿ-1 ದಾಖಲೆಯಲ್ಲಿ ನಮ್ಮ ಹೆಸರು ದಾಖಲಿಸಲಾಗಿದೆ ಎಂದು ಬರೆದಿಲ್ಲ. ನಿಪಿ-1 ರಿಂದ ನಿಪಿ-3 ಹಕ್ಕು ಬಿಟ್ಟು ಕೊಟ್ಟ ಆಧಾರದ ಮೇಲೆ ನಮ್ಮ ಹೆಸರುಗಳನ್ನು ದಾಖಲಿಸಲಾಗಿದೆ ಎಂದು ಹೇಳುವುದು ಕಾನೂನು ಬಾಹಿರ ಅಂದರೆ ಸರಿಯಲ್ಲ.

6) ನಿಪಿ-4 ಅರ್ಜಿಯನ್ನು ಬಸವ್ವ ಕೋಂ ಶಿವನಗೌಡ ರಾಚಪ್ಪನವರ ರವರು ಬರೆದು ಕೊಟ್ಟಿಲ್ಲ ಅಂದರೆ ಸರಿಯಲ್ಲ. ಅದರಲ್ಲಿ ಅವರ ಸಹಿ ಇಲ್ಲಾ ಎಂದರೆ ನಿಜ. ಸಾಕ್ಷಿಯು ಅವರ ಗಂಡನ ಸಹಿ ಇದೆ ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ಶಿವನಗೌಡ ರವರು ಆಸ್ತಿಯ ಹಕ್ಕನ್ನು ನಾನು ಬಿಟ್ಟು ಕೊಟ್ಟಿದ್ದೇನೆ ಎಂದು ಬರೆದಿಲ್ಲ ಎಂದರೆ ನಿಜ. ಶಿವನಗೌಡ ರವರಿಗೆ ನಿಪಿ-4 ರ ಅರ್ಜಿ ಕೊಡುವ ಅಧಿಕಾರ ಇರಲಿಲ್ಲ ಎಂದರೆ ನಿಜ. ನಿಪಿ-3 ರಲ್ಲಿನ ದಾವಾ ಆಸ್ತಿಗೆ ಸಂಬಂದಿಸಿದ ಠರಾವು ಶಿವನಗೌಡ ರವರ ಅರ್ಜಿಯ ಮೇರೆಗೆ ಮಾಡಿರುವುದಾಗಿ ಅದರಲ್ಲಿ ಬರೆಯಲಾಗಿದೆ ಎಂದರೆ ನಿಜ.

7) ನಿಮ್ಮ ತಂದೆ 1978 ರಲ್ಲಿ ದತ್ತಕ ಹೋಗಿದ್ದರು ಎಂದು ತೋರಿಸಲು ನೋಂದಾಯಿತ ದತ್ತಕ ಪತ್ರ ಹಾಜರು ಪಡಿಸಿದ್ದಿರಾ ಎಂದರೆ ಸಾಕ್ಷಿಯು 1984 ರಲ್ಲಿ ನೋಂದಣಿಯಾದ ದತ್ತಕ ಪತ್ರ ಹಾಜರು ಪಡಿಸಿದ್ದು, 1978 ರಲ್ಲಿ ಸಂಪ್ರದಾಯದಂತೆ ದತ್ತಕ ಆಗಿತ್ತು ಎಂದು ನುಡಿಯುತ್ತಾರೆ. ಈ ವಿಷಯ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 1984 ರಲ್ಲಿ ಗದಿಗೆಪ್ಪಗೌಡ ರವರು ಜೀವಂತ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಗದಿಗೆಪ್ಪಗೌಡ ರವರು 1983 ರಲ್ಲಿ ಮೃತ ಪಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಹಾಗೂ ನಮಗೂ ಸಂಬಂದವಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಎತ್ತಿಹಾಕಬೇಕೆಂದು ಪಂಚಾಯಿತಿ ಅಧಿಕಾರಿಗಳೊಂದಿಗೆ ಶಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. 1978 ರಲ್ಲಿ ಸಂಪ್ರದಾಯದಂತೆ ದತ್ತಕವಾಗಿದ್ದು ಅದು 1984 ರಲ್ಲಿ ನೋಂದಣಿಯಾಗಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ದತ್ತಕ ದಾಖಲೆಯನ್ನು ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ವಾದಿಯರು ವಾರಸಾ ಪ್ರಕಾರ ದಾವಾ ಆಸ್ತಿಯ ಮಾಲೀಕರಿದ್ದು ದಾವಾ ಆಸ್ತಿ ನಮಗೆ ಸಂಬಂದವಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ಮಲ್ಲಿಕಾರ್ಜುನ)

**C/c ದಿವಾಣಿ ನ್ಯಾಯಾಧೀಶರು, ನವಲಗುಂದ.**